ಕರೆ ಮಾಡಿ "ಎರಡು ನೆಗೆಟಿವ್ವು ಮೂರು ಪಾಸಿಟಿವ್ವು ಇರುತ್ತೆ, ಒಂದನೇ ನೆಗೆಟಿವ್ವು ಮರ್ನೇ ಪಾಸಿಟಿವ್ವಿಗೆ, ಎರಡನೇ ಪಾಸಿಟಿವ್ವು ಪಕ್ಕದ್ದಕ್ಕೆ, ಒಂದು ಗ್ರೌಂಡಿಂಗು ಖಾಲಿ ಬಿಡ್ಬೇಕು, ಲೋಡ್ ಜಾಸ್ತಿ ಆಗಿ ಹಾಳಾಗಿರ್ಬೇಕು ಚೆಕ್ ಮಾಡು ಎಲ್ಲಾ ಬೇಸಿಕ್ಸು ಚೆಕ್ ಮಕ್ಳೂ ಮಾಡ್ತಾರೆ' ಎಂದು ಏನೇನೋ ಹೇಳಿ ತಲೆಯೆಲ್ಲಾ ಮಿಕ್ಸಿಯಲ್ಲಿ ಹಾಕಿ ರುಬ್ಬಿದಂತೆ ತಿರುಗುತ್ತಿತ್ತು. ಹಿಂದೆ ನಿಂತಿದ್ದ ಸಂಬಂಧಿಕರೆಲ್ಲಾ ಹೊಟ್ಟೆ ಬಡಿದುಕೊಂಡು ನಗಲು ತಯಾರಾದ ದುರುಳರಂತೆ ಗೋಚರಿಸಲು ಶುರುವಾದರು. ರಿಪೇರಿ ಬಾಬು ನೆನಪಾದ. ಕಣ್ಣಲ್ಲಿ ನೀರು ಬರುವುದೊಂದು ಬಾಕಿ. ಎಲ್ಲವನ್ನೂ ಬಿಚ್ಚಿ ಹಾಗೇ ಮತ್ತೆ ಜೋಡಿಸಿ ಅಲ್ಲಿಯವರೆಗೂ ಸೌಜನ್ಯಕ್ಕೂ ನೆನೆಯದಿದ್ದ ದೇವರುಗಳ ಹೆಸರುಗಳನ್ನೆಲ್ಲಾ ಭಜಿಸುತ್ತಾ ಸ್ವಿಚ್ ಒತ್ತಿದೆ. ದೇವರು ಎದ್ದಿದ್ದರು, ಬಲ್ಬ್ ಬೆಳಕು ಬೀರಿತು. ಬದುಕಿದೆಯಾ ಬಡಜೀವವೇ ಎನ್ನುತ್ತಾ ಕಾಲರ್ ಏರಿಸಿಕೊಂಡು ಹೊರಬಂದೆ. ಅದಾದ ಮೇಲೆ ಯಾರ ಮನೆಗೆ ಹೋಗುವುದಾದರೂ ಮನೆಯಲ್ಲೇನಾದರೂ ದುರಸ್ತಿಗಿದೆಯಾ ಎಂದು ಮುಂಚಿತವಾಗಿಯೇ ಕೇಳಿಕೊಂಡು ಹೋಗುತ್ತಿದ್ದೆ.

ರಿಪೇರಿಯ ಬಗ್ಗೆ ಇಷ್ಟೆಲ್ಲಾ ಬರೆದ ಮೇಲೆ ರಿಪೇರಿ ಎಂಬ ಪದವನ್ನು ಕೇಳಿದರೇ ಉರಿದುಬೀಳುತ್ತಿದ್ದ ಒಬ್ಬ ವ್ಯಕ್ತಿಯ ಬಗ್ಗೆ ಹೇಳಲೇಬೇಕು. ಅವರೇ ನನ್ನ ತಾತ. ವಸ್ತುವಾಗಲೀ, ಮನುಷ್ಯನಾಗಲೀ ಒಮ್ಮೆ ಚಾಲೂ ಆದರೆ ಮುಗಿಯಿತು, ಮತ್ತೆ ನಿಲ್ಲುವುದು ಅದರ ಅಂತ್ಯವಾದಾಗಲೇ ಎಂದು ಬಲವಾಗಿ ನಂಬಿದ್ದ ಅವರು 'ಒಂದ್ಸಲ ರಿಪೇರಿಗ್ ಬಂತು ಅಂದ್ರೆ ಮುಗೀತು, ಮತ್ತೆ ಜಪ್ಪಯ್ಯ ಅಂದ್ರೂ ಮೊದಲಿನ ತರ ಆಗಲ್ಲ, ಅಷ್ಟೇ ಅದರ ಕಥೆ' ಎಂಬುದನ್ನು 'ಕರಾಗ್ರೇ ವಸತೇ ಲಕ್ಷ್ಮಿ' ಶ್ಲೋಕದಂತೆ ದಿನಕ್ಕೊಮ್ಮೆ ಹೇಳುತ್ತಿದ್ದರು. ರಿಪೇರಿಗೆ ಹೋದ ಟೀವಿ. ವಾಪಸ್ಸು ಬಂದ ಮೇಲೆ 'ನೋಡಿ ತಾತ, ಮುಂಚಿನ್ ತರಾನೇ ಬರ್‍ತಿದೆ' ಎಂದು ಹೇಳಿದರೆ ನಂಬುತ್ತಲೇ ಇರಲಿಲ್ಲ. ನಮಗಾರಿಗೂ ಕಾಣದ ಚುಕ್ಕಿಯೊಂದು ಅವರಿಗೆ ಟೀವಿ ಪರದೆಯಲ್ಲೆಲ್ಲೋ ಕಾಣುತ್ತಿತ್ತು. 'ರಿಪೇರಿಗ್ ಹೋಗಿದ್ದೇ ಹೋಗಿದ್ದು ಮಿಕ್ಸಿ ಸರಿಯಾಗಿ ಯಾವುದನ್ನೂ ಅರೀತಾನೇ ಇಲ್ಲ, ಕಾಯಿ ಮೆಣಸು ಎಲ್ಲಾ ಬಾಯಿಗೇ ಸಿಗುತ್ತೆ' ಅಂತಲೋ, 'ಮೊಬೈಲ್ ಕಥೆ ಇಷ್ಟೇ, ಮೊದ್ಲು ಉಸಿರು ಬಿಟ್ರೂ ಕೇಳ್ತಿತ್ತು, ರಿಪೇರಿ ಆದ್ಮೇಲೆ ಕಿರುಚಿದ್ರೂ ಕೇಳಲ್ಲ' ಎಂದೋ ಅವರ ಆಧಾರರಹಿತ ದೂರುಗಳನ್ನು ನಾವು ಆಗಾಗ ಕೇಳಿಸಿಕೊಳ್ಳಬೇಕಾಗುತ್ತಿತ್ತು. ಇಂತಹ ತಾತನಿಗೆ ಹೃದಯದ ತೊಂದರೆ ಆಗಿ ವೈದ್ಯರು ಬೈಪಾಸ್ ಸರ್ಜರಿ ಮಾಡಬೇಕು ಎಂದಾಗ ತಾತ ಪೂರ್ತಿ ಕುಗ್ಗಿಹೋಗಿಬಿಟ್ಟರು. 'ಒಂದ್ಸಲ ದೇಹಾನ ಕುಯ್ದರೆ ಮತ್ತೆ ಮೊದ್ಲಿನ್ ತರ ಆಗೋದೇ ಇಲ್ಲ, ಬೇಡ ಬಿಡಿ ಹಿಂಗೇ ಸತ್ರೂ ಪರ್ವಾಗಿಲ್ಲ' ಎನ್ನಲು ಶುರು ಮಾಡಿದ್ದು ನೋಡಿ ನಮಗೂ ಪಾಪ ಎನ್ನಿಸಿತು. ಆಪರೇಷನ್ ಆಗಿ ತಿಂಗಳುಗಳು ಕಳೆದ ಮೇಲೂ 'ಹಿಂದೆಲ್ಲಾ ಅವ್ರೇ ಬೆಳೀತಿದ್ರು, ಅವ್ರೇ ತಿನ್ತಿದ್ರು, ನೂರ್ ವರ್ಷ ಆದ್ರೂ ಜಟ್ಟಿ ತರ ಇರ್‍ತಿದ್ರು, ಎಲ್ಲಾ ಕಲಬೆರಕೆ ಈಗ, ನಂದೇ ಪರ್ವಾಗಿಲ್ಲ ನಿಮ್ ದೇಹ ಎಲ್ಲಾ ನಲವತ್ತಕ್ಕೇ ರಿಪೇರಿಗ್ ಬರುತ್ತೆ ನೋಡಿ' ಎಂದು ನಮ್ಮನ್ನು ಗಾಬರಿಯಾಗುವಂತೆ ಅಣಕಿಸುತ್ತಿದ್ದರು!.

ಮದ್ದು ತಯಾರಿಸುವ ಔಷಧ ಕಂಪನಿಗಳೇ ಕೆಲವೊಮ್ಮೆ ರೋಗಗಳನ್ನು ಸೃಷ್ಟಿ ಮಾಡುವಂತೆ, ಆಂಟಿವೈರಸ್ ಕಂಪನಿಯವರು ಬೇಕೆಂದೇ ವೈರಸ್ಸುಗಳನ್ನು ಬಿಡುವಂತೆ ರಿಪೇರಿಗೆ ಬರಲಿ ಎಂದೇ ವಸ್ತುಗಳನ್ನು

